<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ</u>

<u>ಕೆ ಆರ್ ನಗರ.</u>

<u>ಸಿಸಿ.910/2020</u>

**ಪಿರ್ಯಾದಿ** ಃ ಸರ್ಕಾರದ ಪರ ಕೆ.ಆರ್.ನಗರ ಪೋಲೀಸ್

ವಿರುದ್ಧ

**ಆರೋಪಿತರು** ಃ 1. ಸೋಮಶೇಖರ್.ಹೆಚ್.ಸಿ ಬಿನ್ ಚಂದ್ರಯ್ಯ,

32 ವರ್ಷ, ವಾಸಃ ಹೆಬ್ಬಾಳುಬೋರೆ ಗ್ರಾಮ,

ಹೆಬ್ಬಾಳು ಹೋಬಳಿ,

2. ಗೋವಿಂದರಾಜು.ಜಿ ಬಿನ್ ಲೇಟ್ ಗೋವಿಂದಯ್ಯ,

46 ವರ್ಷ, ವಾಸಃ ಕೊಳ್ಳೇಗಾಲ ಟೌನ,

ನಂ.1691, 2 ನೇ ಹಂತ, ಸರದಾರ ವಲ್ಲಬಾಯಿ ಪಟೇಲ್,

ಮೈಸೂರು ಸಿಟಿ.

**<u>ಆರೋಪಣೆ</u>**

ದಿನಾಂಕಃ 20.07.2019 ರಂದು ಕೆ.ಆರ್.ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಹೆಬ್ಬಾಳು ಗ್ರಾಮದ ಕೆರೆ ಬಳಿ ಹೆಬ್ಬಾಳು ಪುಟ್ಟೇಗೌಡ ಎಂಬುವವರ ತೆಂಗು ಮತ್ತು ಅಡಿಕೆ ತೋಟದ ಮುಂಭಾಗದಲ್ಲಿ ಹೆಬ್ಬಾಳು ಕಪ್ಪಡಿ ಕ್ಷೇತ್ರದ ಮುಖ್ಯ ರಸ್ತೆಯಲ್ಲಿ ಕಪ್ಪಡಿ ಕಡೆಯಿಂದ ಚಾಸಾ 2- ನಾಗರಾಜು ರವರು ತಮ್ಮ ಕೆಎ-17-ವಿ-4457 ನಂಬರಿನ ಬಜಾಜ್ ಸಿಟಿ 100 ಬೈಕಿನಲ್ಲಿ 03.30 ಗಂಟೆ ಸಮಯದಲ್ಲಿ ಹೆಬ್ಬಾಳು ಕಡೆಗೆ ಹೋಗುತ್ತಿದ್ದಾಗ ಅದೇ ವೇಳೆಗೆ ಹೆಬ್ಬಾಳು ಕಡೆಯಿಂದ 2 ನೇ ಆರೋಪಿಯಾದ ನೀವು ಕೆಎ-09-ಇಡಿ-844 ನಂಬರಿನ ಹಿರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್ ನ್ನು ವಾಹನ ಚಾಲನ ಪರವಾನಗಿ ಇಲ್ಲದೇ ಇದ್ದರೂ ಸಹ 1 ನೇ ಆರೋಪಿಗೆ ಚಾಲನೆ ಮಾಡಲು ನೀಡಿರುತ್ತೀರಿ. ಆ ಮೂಲಕ 2 ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯಿದೆ 180 ಸಹವಾಚಕ ಕಲಂ 5 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಎರಡನೆಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ಮೇಲ್ಕಂಡ 2ನೇ ಆರೋಪಿಯ ವಾಹನವನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗಿರುತ್ತೀರಿ. ಆ ಮೂಲಕ 1ನೇ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಮೂರನೇಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ಮೇಲ್ಕಂಡ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗಿ ಚಾಸಾ 2-ನಾಗರಾಜು ರವರಿಗೆ ಡಿಕ್ಕಿ ಪಡಿಸಿ ಅವರ ಬಲಕಾಲಿನ ಪಾದಕ್ಕೆ ಪೆಟ್ಟಾಗಿ ಬಲಗಾಲಿನ 02, 03, 04, 05 ಬೆರಳುಗಳಿಗೆ ತೀವ್ರ ಸ್ವರೂಪದ ಗಾಯವುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 338 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಕೊನೆಯದಾಗಿ, ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು 2ನೇ ಆರೋಪಿಯ ವಾಹನಕ್ಕೆ ವಾಹನ ಚಾಲನಾ ಪರವಾನಿಗೆ ಇಲ್ಲದಿದ್ದರಾ ಚಾಲನೆ ಮಾಡಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 181 ಸಹವಾಚಕ ಕಲಂ 3 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ದಿಃ 07.10.2023

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.